**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.647/2021**

ಪಿ.ಡಬ್ಲ್ಯೂಃ **9**

ಸಿ.ಡಬ್ಲ್ಯೂಃ 10

| | | |
|---|---|---|
| ಹೆಸರು | ಃ | ಗೌಡ ಕೆ |
| ತಂದೆಯ ಹೆಸರು | ಃ | ಕರಿಯಪ್ಪ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಪಿಸಿ 265 |
| ವಾಸಸ್ಥಳ | ಃ | ಕಡೂರು |

**ದಿನಾಂಕಃ 07-05-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು **20-08-2016** ರಿಂದ **28-01-2023** ರವರೆಗೆ ನಾನು ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪೊಲೀಸ್ ಪೇದೆಯಾಗಿ **ಆಗಿ ಕರ್ತವ್ಯ** ನಿರ್ವಹಿಸುತ್ತಿದ್ದೇನೆ.

ದಿನಾಂಕಃ 17-09-2020 ರಂದು ಬೆಳಿಗ್ಗೆ 9-00 ಗಂಟೆಗೆ ಸಿ ಪಿ ಐ ರವರು ನನಗೆ ಮತ್ತು ಚಾಸಾ-9 ರವರಿಗೆ ಲಕ್ಕವಳ್ಳಿ ಮೊಕದ್ದಮೆ ಸಂಖ್ಯೆ 46/2018 ರ ಪ್ರಕರಣದಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ನೇಮಕ ಮಾಡಿದ್ದು, ಅದರಂತೆ ನಾನು ಮತ್ತು ಚಾಸಾ-9 ರವರು ರಂಗೇನಹಳ್ಳಿಗೆ ಹೋಗಿ ಆರೋಪಿ ಮತ್ತು ಮಾಲು ಪತ್ತೆಗಾಗಿ ಮಾಹಿತಿಯನ್ನುಪಡೆದು ವಿಚಾರಿಸಲಾಗಿ ಯಾವುದೇ ಮಾಹಿತಿ ದೊರೆಕಿರುವುದಿಲ್ಲ. ನಂತರ 1-00 ಗಂಟೆಗೆ ರಂಗೇನಹಳ್ಳಿ ಬಿಟ್ಟು ಭದ್ರಾವತಿ ಹಿರಿಯೂರಿನ ಕಡೆಗೆ ಹೋಗಲು 1-40 ಗಂಟೆ ಸಮಯದಲ್ಲಿ ಭದ್ರಾ ಸೇತುವೆ ಬಳಿ ಹೋಗುತ್ತಿರುವಾಗ ಒಬ್ಬ ವ್ಯಕ್ತಿ ಅನುಮಾನಸ್ಪದವಾಗಿ ಮೋಟಾರ್ ಸೈಕಲ್ ನಲ್ಲಿ ಓಡಾಡುತ್ತಿದ್ದು, 1-45 ಗಂಟೆ ಸಮಯದಲ್ಲಿ ಆತನನ್ನು ವಶಕ್ಕೆ ಪಡೆದು ಆತನ ಹೆಸರು ವಿಳಾಸ ಕೇಳಲಾಗಿ ದಾದಾಪೀರ್ ಬಿನ್ ಟಿಪ್ಪು ಸಾಬ್, ವಾಸ ಬಸಲಿಕಟ್ಟೆ, ಭದ್ರಾವತಿ ಎಂದು ನುಡಿದಿದ್ದು, ಅನುಮಾನ ಇದ್ದುದ್ದರಿಂದ ಮಧ್ಯಾಹ್ನ 2-00 ಗಂಟೆ ಸಮಯಕ್ಕೆ ಲಕ್ಕವಳ್ಳಿ ಠಾಣೆಯಲ್ಲಿದ್ದ ಸಿ ಪಿ ಐ ರವರ ಮುಂದೆ ಆತನನ್ನು ಹಾಜರುಪಡಿಸಿರುತ್ತೇವೆ.

**<u>ಪಾಟೀ ಸವಾಲು ಃ ಆರೋಪಿತರ ಪರ</u>** <u>ಶ್ರೀ ಹೆಚ್ ಸಿ ಎಸ್</u> **<u>ವಕೀಲರಿಂದ.</u>**

ಆರೋಪಿಯು ಅನುಮಾನಸ್ಪದವಾಗಿ ಓಡಾಡುತ್ತಿದ್ದರು ಎಂದು ಹೇಳುವ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ಆ ದಿನದಂದು ಸಿಮೆಂಟ್ ಕಲ್ಲರ್ ಪ್ಯಾಂಟ್ ಧರಿಸಿದ್ದು, ಟೀ ಶರ್ಟ ಯಾವ ಬಣ್ಣದ್ದು ಎಂದು ತಿಳಿದಿರುವುದಿಲ್ಲ. ಆರೋಪಿಯು ಅನುಮಾನಸ್ಪದವಾಗಿ ಓಡಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಆರೋಪಿಯು ಅನುಮಾನಸ್ಪದವಾಗಿ ಓಡಾಡುತ್ತಿದ್ದರು ಎಂದು ಅವರನ್ನು ದಸ್ತಗಿರಿ ಕ್ರಮ ಜರುಗಿಸಿರುತ್ತಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**